ಅಸಲು ದಾವಾ ನಂಃ 1/2015 ಪಿ.ಡಬ್ಲ್ಯೂಃ 01

ಸಾಕ್ಷಿಗೆ ದಿಃ 21.11.2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮಧ್ಯಂತರ ಅರ್ಜಿ 13 ಮತ್ತು 14 ರ ಪುರಸ್ಕಾರದ ಮೇರೆಗೆ ಮುಂದುವರಿದ ಪಾಟಿ ಸವಾಲು 6 ರಿಂದ 8 ನೇ ಪ್ರತಿವಾದಿ ಪರ ಶ್ರೀ ಎಂ ಎನ್ ವಕೀಲರಿಂದಃ

ದಾವಾದ ಆಸ್ತಿಗಳ ಬಗ್ಗೆ ಎಲ್ಲಾ ಮಾಹಿತಿ ನನಗೆ ಇದೆ. ದಾವಾದ ಬಿ ಶೆಡ್ಯೂಲ್ ಆಸ್ತಿ ಮನೆದಳದ ಬಗ್ಗೆ ಕೂಡ ಮಾಹಿತಿ ಇದೆ. ಮೂಲತಃ ದಾವಾದ ಎಲ್ಲಾ ಆಸ್ತಿಗಳ ದ್ವಾರಹಳ್ಳಿ ಗಂಗಮ್ಮನಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ಬಸಪ್ಪಗೌಡನಿಗೆ ಸೇರಿದ ಆಸ್ತಿಗಳು ಇರುತ್ತದೆ. ದಾವಾ ಆಸ್ತಿಗಳು ಬಸಪ್ಪಗೌಡನಿಗೆ ಸೇರಿದ ಆಸ್ತಿಗಳಲ್ಲ ಎಂದು ಸೂಚಿಸುವುದು ಸರಿಯಲ್ಲ. ದ್ವಾರಹಳ್ಳಿ ಗ್ರಾಮದ ಗಂಗಮ್ಮ ಎನ್ನುವವರು ಜೋಗಿಹಳ್ಳಿ ಗ್ರಾಮದ ಚನ್ನಪ್ಪಗೌಡ ಎಂಬುವವನ್ನು ದ್ವಾರಹಳ್ಳಿಗೆ ಕರೆದುಕೊಂಡು ಬಂದು ವಿವಾಹವಾಗಿ ಅಲ್ಲಿ ಸಂಸಾರ ನಡೆಸಿರುತ್ತಾರೆ ಎಂದರೆ ಸರಿಯಲ್ಲ. ಚನ್ನಪ್ಪಗೌಡ ಗಂಗಮ್ಮನಿಗಿಂತ ಮೊದಲೇ ತೀರಿಕೊಂಡರು ಎಂದರೆ ಗೊತ್ತಿಲ್ಲ. ಜೋಗಿಹಳ್ಳಿ ಚನ್ನಪ್ಪಗೌಡನಿಂದ ಗಂಗಮ್ಮನಿಗೆ ಯಾವುದೇ ಆಸ್ತಿಗಳು ಬರಲಿಲ್ಲ ಎಲ್ಲಾ ಆಸ್ತಿಗಳು ಗಂಗಮ್ಮನಿಗೆ ಆಕೆಯ ತಾಯಿಯಿಂದ ಬಂದಂತಹ ಆಸ್ತಿಗಳು ಎಂದರೆ ಸರಿಯಲ್ಲ. ಚನ್ನಪ್ಪಗೌಡ ಮತ್ತು ಗಂಗಮ್ಮ ದಂಪತಿಗೆ ಚನ್ನಬಸಪ್ಪಗೌಡ ಎಂಬ ಮಗ ಇದ್ದ ಎಂದರೆ ಸರಿಯಲ್ಲ. ಚನ್ನಪ್ಪಗೌಡರಿಗೆ ಚನ್ನಬಸಪ್ಪಗೌಡ ಎಂಬ ಮಗ ಇದ್ದರು ಎಂದರೆ ದತ್ತು ಮಗ ಇದ್ದರು. ಚನ್ನಬಸಪ್ಪಗೌಡ ಚನ್ನಪ್ಪಗೌಡನ ಸ್ವಂತ ಮಗ ದತ್ತು ಮಗ ಅಲ್ಲ ಎಂದರೆ ಸರಿಯಲ್ಲ. ಚನ್ನಬಸಪ್ಪಗೌಡ ದತ್ತು ಮಗ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ಚನ್ನಬಸಪ್ಪಗೌಡರಿಗೆ ರುದ್ರಪ್ಪಗೌಡ (ಆರ್ ಸಿ ಪಾಟೀಲ್) ಮತ್ತು ಚನ್ನಪ್ಪಗೌಡ ( ಸಿ ಸಿ ಪಾಟೀಲ್) ಎಂಬ ಮಕ್ಕಳು ಇದ್ದರು ಎಂದರೆ ಚನ್ನಬಸಪ್ಪಗೌಡರಿಗೆ 3 ಮಕ್ಕಳಿದ್ದರು. ರುದ್ರಪ್ಪಗೌಡ, ಚನ್ನಪ್ಪಗೌಡ ಮತ್ತು ಮೊದಲನೇ ಮಗ ಮಲ್ಲಪ್ಪಗೌಡ. ಮಲ್ಲಪ್ಪಗೌಡ ಸಣ್ಣ ಮಗುವಾಗಿದ್ದಾಗ ಮರಣ ಹೊಂದಿರುತ್ತಾರೆ. ದಾವಾ ಆಸ್ತಿಗಳು ಗಂಗಮ್ಮನ ಮೂಲಕ ಆರ್ ಸಿ ಪಾಟೀಲ್ ಮತ್ತು ಸಿ ಸಿ ಪಾಟೀಲ್ ಗೆ ಬಂದಂತಹ ಸ್ತ್ರೀಧನ ಆಸ್ತಿಗಳು ಎಂದರೆ ಸರಿಯಲ್ಲ. 03.07.1965 ರಂದು ಆರ್ ಸಿ ಪಾಟೀಲ್ ಮತ್ತು ಸಿ ಸಿ ಪಾಟೀಲ್ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಹಿಸ್ಸೆ ಆದ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ದಾವಾದ ಸ್ವತ್ತುಗಳು 1965 ರ ಹಿಸ್ಸೆಯಲ್ಲಿ ಆರ್ ಸಿ ಪಾಟೀಲ್ ರವರ ಭಾಗಕ್ಕೆ ವಿಂಗಡಿಸಿದ ಸ್ವತ್ತುಗಳು ಎಂದರೆ ಸರಿ. ಸದರಿ ಆಸ್ತಿಗಳು ಆರ್ ಸಿ ಪಾಟೀಲ್ ರವರ ಸ್ವಂತ ಆಸ್ತಿಗಳು ಎಂದು ಸೂಚಿಸುವುದು ಸರಿಯಲ್ಲ. ದಾವಾದ ಆಸ್ತಿಗಳು ನಮಗೆ ಒಟ್ಟು ಕುಟುಂಬದ ಆಸ್ತಿಗಳು ಅಲ್ಲ, ಪಿತ್ರಾರ್ಜಿತ ಆಸ್ತಿಗಳೂ ಅಲ್ಲ ಎಂದು ಸೂಚಿಸುವುದು ಸರಿಯಲ್ಲ. 1972 ನೇ ಸಾಲಿನಲ್ಲಿ ಆರ್ ಸಿ ಪಾಟೀಲ್ ಮತ್ತು ಅವರ ಗಂಡು ಮಕ್ಕಳು ಅವರ ನಡುವೆ ಒಂದು ಹಿಸ್ಸ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ಹಿಸ್ಸಾದಲ್ಲಿ ಆರ್ ಸಿ ಪಾಟೀಲ್ ಅವರಿಗೂ ಕೂಡ ಒಂದು ಪಾಲು ಕಾಯ್ದಿರಿಸಿಕೊಂಡರು ಎಂದರೆ ಸರಿ. ಅಗಸನಹಳ್ಳಿ ಗ್ರಾಮದ ಸ.ನಂ. 4/1 ಮತ್ತು 4/2 ರ ಸ್ವತ್ತುಗಳನ್ನು ಒಂದು ನೊಂದಾದ ದಾನಪತ್ರದ ಮುಖಾಂತರ ಆರ್ ಸಿ ಪಾಟೀಲ್ ರವರು ಕುಸುಮ ಪಾಟೀಲ್ ರವರಿಗೆ ದಾನ ಕೊಟ್ಟಿದ್ದಾರೆ ಎಂದರೆ ಸರಿ. ಆರ್ ಸಿ ಪಾಟೀಲ್ ಮತ್ತು ಕುಸುಮಾ ಪಾಟೀಲ್ ಅಗಸನಹಳ್ಳಿ ಗ್ರಾಮದಲ್ಲಿ ಸುಮಾರು 30 ವರ್ಷಗಳಿಂದ ನೆಲೆಸಿದ್ದಾರೆ ಎಂದರೆ ಸರಿ. ಆರ್ ಸಿ ಪಾಟೀಲ್ ಮತ್ತು ಕುಸುಮಾ ಪಾಟೀಲ್ ಸತಿ-ಪತಿಗಳಾಗಿ ದಾಂಪತ್ಯ ನಡೆಸಿದ್ದಾರೆ ಎಂದರೆ ಸರಿ. 2006-07 ನೇ ಸಾಲಿನಲ್ಲಿ ದಾನಪತ್ರವನ್ನು ಕುಸುಮಾ ಪಾಟೀಲ್ ರವರಿಗೆ ಆರ್ ಸಿ ಪಾಟೀಲ್ ಮಾಡಿಕೊಟ್ಟಿದ್ದಾರೆ ಎಂದರೆ ಮೋಸದಿಂದ ಮಾಡಿಕೊಂಡಿದಾದ್ದರೆ. ಸದರಿ ದಾನಪತ್ರ ನೈಜ ದಾನಪತ್ರ ಎಂದು ಸೂಚಿಸುವುದು ಸರಿಯಲ್ಲ. ಸ.ನಂ. 4/1 ಮತ್ತು 4/2 ನ್ನು ಕುಸುಮಾ ಪಾಟೀಲ್ ಅನುಭವಿಸುತ್ತಿದ್ದಾರೆ ಎಂದರೆ ಸರಿ. ಸ.ನಂ. 66 ರ 6 ಎಕರೆ 7 ಗುಂಟೆ ಸ್ವತ್ತನು 7 ನೇ

ಪ್ರತಿವಾದಿ ಇ ಎನ್ ಬಸವರಾಜ ಎನ್ನುವವರಿಗೆ ಆರ್ ಸಿ ಪಾಟೀಲ್ ರವರು ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಆದರೆ ಅದು ಮೋಸದ ಖರೀದಿ ಪತ್ರ. ಸದರಿ ಖರೀದಿ ಪತ್ರ ನೈಜ ಖರೀದಿ ಪತ್ರ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆ ಬ್ಯಾಂಕ್ ಮತ್ತು ಇನ್ನಿತರ ಸಹಕಾರಿ ಸಂಘಗಳಲ್ಲಿ ಸಾಲ ಮಾಡಿದ್ದರು ಎಂದರೆ ಸರಿ. ಲಕ್ಷ್ಮಿಕಾಂತ್ ಎನ್ನುವವರ ಹತ್ತಿರ ಕೂಡ ಸಾಲ ಮಾಡಿದ್ದರು ಎಂದರೆ ಸರಿ. ಇದರ ಬಗ್ಗೆ ಕೇಸು ಕೂಡ ನಡೆಯಿತು ಎಂದರೆ ಸರಿ. ಅಡಿಕೆ ಮಂಡಿಯಲ್ಲಿ ಕೂಡ ಸಾಲ ಮಾಡಿದ್ದರು ಎಂದರೆ ಸರಿ. ಆದರೆ ಸಾಲವನ್ನು ಅವ್ಯವಹಾರಕ್ಕಾಗಿ ಮಾಡಿಕೊಂಡಿದ್ದಾರೆ. ಆರ್ ಸಿ ಪಾಟೀಲ್ ರವರು ಮನೆಗೋಸ್ಕರ ಸಾಲ ಮಾಡಿದ್ದಾರೆ ಎಂದರೆ ಸರಿಯಲ್ಲ. ಟಿ ಎ ಎಂ ಸಿ ಸೊಸೈಟಿಯಲ್ಲಿಯೂ ಸಹ ಸಾಲ ಮಾಡಿದ್ದರು ಎಂದರೆ ಸರಿ. ಬಹಳ ಸಾಲ ಉಳಿದಿದ್ದು ಎಂದರೆ ಸರಿ. 30-40 ವರ್ಷ ವ್ಯಾಜ್ಯ ಕೂಡ ನಡೆಯಿತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಅಡಮಾನ ಮಾಡಿ ಸಾಲ ಮಾಡಿದ್ದರು ಎಂದರೆ ಸರಿ. ಆರ್ ಸಿ ಪಾಟೀಲ್ ಯಾವುದೇ ಅವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಅಡಮಾನವಾದ ಆಸ್ತಿಗಳನ್ನು ಬಿಡಿಸಿಕೊಳ್ಳಲು ಟಿ ಎ ಎಂ ಸಿ ಸೊಸೈಟಿಯಲ್ಲಿ ಜಮೀನು ಹರಾಜಿಗೆ ಕೂಡ ಬಂದಿತ್ತು ಎಂದರೆ ಗೊತ್ತಿಲ್ಲ. ಸದರಿ ಸಾಲದ ಬಗ್ಗೆ ನ್ಯಾ.ದ ಮೂಲಕ ಸೆಟಲ್ ಮೆಂಟ್ ಆಯಿತು ಎಂದರೆ ಗೊತ್ತಿಲ್ಲ. ಯಾವುದೇ ಸಾಲವನ್ನು ಬಾಕಿ ಇಟ್ಟುಕೊಳ್ಳಬಾರದು ಎಂದು ಆರ್ ಸಿ ಪಾಟೀಲ್ ರವರ ಆಸೆ ಇತ್ತು ಎಂದರೆ ಗೊತ್ತಿಲ್ಲ. ಬಸವರಾಜಪ್ಪನಿಗೆ ಜಮೀನು ಮಾರಾಟ ಮಾಡಿ ಸದರಿ ಹಣದಿಂದ ಸಾಲ ತೀರಿಸಿದ್ದಾರೆ ಎಂದರೆ ಗೊತ್ತಿಲ್ಲ. ಬಸವರಾಜಪ್ಪ ಸದರಿ ಆಸ್ತಿಯ ಪ್ರಾಮಾಣಿಕ ಖರೀದಿದಾರ ಎಂದು ಸೂಚಿಸುವುದು ಸರಿಯಲ್ಲ. ಸದರಿ ಮಾರಾಟವಾದ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕಿಲ್ಲ ಎಂದು ಸೂಚಿಸುವುದು ಸರಿಯಲ್ಲ.

ರುದ್ರಪ್ಪ ಎನ್ನುವವರಿಗೆ ಸ.ನಂ. 89/2 ರ 1 ಎಕರೆಯನ್ನು ಆರ್ ಸಿ ಪಾಟೀಲ್ ರವರು ಖರೀದಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಆದರೆ ಅದು ಮೋಸದ್ದಾಗಿರುತ್ತದೆ. ರುದ್ರಪ್ಪನು ನಮ್ಮ ತಂದೆಯೊಂದಿಗೆ 30 ವರ್ಷದಿಂದ ಒಂದೇ ಮನೆಯಲ್ಲಿ ವಾಸ ಮಾಡಿಕೊಂಡು ಜೊತೆಯಲ್ಲಿಯೇ ಇದ್ದ ಎಂದರೆ ಸರಿ. ಸದರಿ 1 ಎಕರೆ ಮಾರಾಟ ಮಾಡಿದ ಹಣವನ್ನು ಕೂಡ ಸಲ ತೀರಿಸಲು ವಿನಿಯೋಗ ಮಾಡಿದ್ದಾರೆ ಎಂದರೆ ಸರಿಯಲ್ಲ. 01.03.1974 ರಲ್ಲಿ ಟೆನೆನ್ಸಿ ಕಾಯ್ದೆ ಬಂದಾಗ ಆರ್ ಸಿ ಪಾಟೀಲ್ ರವರ ಎಷ್ಟು ಆಸ್ತಿ ಹೋಯಿತು ಎಂದರೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಉಳಿಸಿಕೊಳ್ಳಲು ಬಹಳ ಪ್ರಯತ್ನ ಮಾಡಿದರು ಎಂದರೆ ಗೊತ್ತಿಲ್ಲ. ಎರಡು ಕ್ರಯಪತ್ರಗಳಲ್ಲಿ ಪಡೆದ ಪ್ರತಿಫಲದಿಂದ ಆರ್ ಸಿ ಪಾಟೀಲ್ ರವರು ಎಲ್ಲಾ ಸಾಲ ತೀರಿಸಲು ಹಣ ವಿಯೋಗ ಮಾಡಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ. ಬಸವರಾಜಪ್ಪ ಖರೀದಿಸಿದ ಆಸ್ತಿಯನ್ನು ಅವರೇ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿ. ರುದ್ರಪ್ಪ ಕೂಡ ಖರೀದಿಸಿದ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಕುಸುಮಾ ಪಾಟೀಲ್ ದಾನಪತ್ರದಲ್ಲಿ ಬಂದ ಆಸ್ತಿಯನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿ. ಆರ್ ಸಿ ಪಾಟೀಲ್ ಮರಣ ಶಾಸನ ಬರೆದಿರುತ್ತಾರೆ ಎಂದರೆ ಅದು ಮೋಸದಿಂದ ಮಾಡಿರುತ್ತಾರೆ. ಮರಣ ಶಾಸನದಡಿಯಲ್ಲಿ ಮಲ್ಲನಗೌಡ ಚನ್ನಬಸಪ್ಪಗೌಡನಿಗೆ ಮತ್ತು ಲಲಿತಮ್ಮನಿಗೆ ಕೂಡ ಆಸ್ತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮರಣ ಶಾಸನದಲ್ಲಿ ಮಲ್ಲನಗೌಡ ಚನ್ನಬಸಪ್ಪಗೌಡ ಮತ್ತು ಲಲಿತಮ್ಮನಿಗೆ ಬಂದ ಆಸ್ತಿಗಳನ್ನು ದಾವಾದಲ್ಲಿ ಸೇರಿಸಿದ್ದೇನೆ. ಆರ್ ಸಿ ಪಾಟೀಲ್ ರವರ ಅಕ್ಕಲು ಹುಷಾರಿನಲ್ಲಿಯೇ ವಿಲ್ ಬರೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ 4 ಜನರಿಗೆ ಬುದ್ಧಿ ಹೇಳುವಂತವರಾಗಿದ್ದರು ಎಂದರೆ ಸರಿ. ಬುದ್ದಿಹೇಳುವವರಾಗಿದ್ದರು ಸಹ ತಪ್ಪು ಮಾಡಿದ್ದಾರೆ.

(ಮುಂದುವರಿದ ಪಾಟಿ ಸವಾಲಿಗೆ 6 ರಿಂದ 8 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಕಲ್ಪಿಸಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.